ಅ) 42

ಆ) ಬಾಗಲಕೋಟೆ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆವತಿಯಿಂದ ಕೆರೆಗಳ ಮೂಲಕ ನೀರಾವರಿ ಪ್ರದೇಶದ ವಿಸ್ತೀರ್ಣ ಈ ಕೆಳಗಿನಂತೆ ಇರುತ್ತವೆ.

ಕ್ರ. ಸಂ.	ತಾಲ್ಲೂಕು	ಕೆರೆಗಳ ಸಂಖ್ಯೆ	ಅಚ್ಚುಕಟ್ಟು ಕ್ಷೇತ್ರ (ಹೆ.ಗಳಲ್ಲಿ)
1.	ಬಾಲಕೋಟೆ	4	1759
2.	ಬಾದಾಮಿ	13	2475
3.	ಹುನುಗುಂದ	9	4279
4.	ಮುಧೋಳ	4	890
5.	ಜಮಖಂಡಿ	9	1081
6.	ಬೀಳಗಿ	3	305
	ಒಟ್ಟು	**42**	**10789**

ಇ) ರೈತ ಕಾಯಕ ಕೆರೆ ಯೋಜನೆಯಡಿ 6 ಕೆರೆಗಳಲ್ಲಿ, ಬರಪರಿಹಾರ ಕಾಮಗಾರಿ ಯೋಜನೆಯಡಿ 20 ಕೆರೆಗಳಲ್ಲಿ ಮತ್ತು ಜಲ ಸಂವರ್ಧನೆ ಯೋಜನಾ ಸಂಘದ ಅಡಿ 16 ಕೆರೆಗಳಲ್ಲಿ ಭಾಗಶ: ಹೂಳನ್ನು ತೆಗೆಯಲಾಗಿದೆ.

ಈ) ಅನುದಾನದ ಲಭ್ಯತೆ ಮೇಲೆ ಪರಿಶೀಲಿಸಲಾಗುವುದು.

2280(2060) ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಲಕೋಟೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಗಮ ಕ್ರಾಸ್‌ನಿಂದ ಆಲಮಟ್ಟಿಯವರೆಗೆ ಇರುವ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯ ರಸ್ತೆಯು ತೀರಾ ಅವ್ಯವಸ್ಥಿತವಾಗಿದ್ದು, ಅದನ್ನು ದುರಸ್ತಿಗೊಳಿಸಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು;

ಆ) ಸದರಿ ರಸ್ತೆಯನ್ನು ಶೀಘ್ರಗತಿಯಲ್ಲಿ ದುರಸ್ತಿಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ&ಆ)ಸದರಿ ರಸ್ತೆ ಅವ್ಯವಸ್ಥಿತವಾಗಿದ್ದು, ತುರ್ತು ದುರಸ್ತಿಗಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಡಿಯಲ್ಲಿ ಹಣ ಮಂಜೂರಾತಿ ಮಾಡಲಾಗಿದ್ದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

2281(3017) ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಲಘಟಗಿ ತಾಲ್ಲೂಕಿನಲ್ಲಿ ಬಾಂದಾರ ಹಾಗೂ ಏತ ನೀರಾವರಿ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಇ) ಇದಕ್ಕೆ ಒದಗಿಸಿರುವ ಅನುದಾನ ಎಷ್ಟು (ಕಾಮಗಾರಿಗಳ ಯೋಜನಾವಾರು, ನಿಗದಿಪಡಿಸಿದ ಹಣದವಾರು, ವರ್ಷವಾರು ವಿವರ ನೀಡುವುದು);

ಈ) ಬೆಣ್ಣೆಹಳ್ಳದಿಂದ ತಬರದ ಹೊನ್ನಳ್ಳ ಕಾಲುವೆ ಉದ್ದ ಎಷ್ಟು ಮತ್ತು ಇದಕ್ಕೆ ನಿಗದಿಪಡಿಸಿದ ಹಣ ಹಾಗೂ ಕಾಮಗಾರಿ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು)

ಉ) ಅದೇ ರೀತಿ ಶಾಲ್ಮಲಾ ನದಿಗೆ ಸರ್ವೆ ಮುಗಿಸಿದ್ದು ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ;

ಊ) ಇದಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಇದರ ಯೋಜನಾ ಗಾತ್ರವೆಷ್ಟು (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ:– (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):–

ಅ) ಹೌದು

ಆ) ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಬಾಂದಾರಗಳು:

1) ಕಾಮಧೇನು ಬಾಂದಾರ ಸುಧಾರಣೆ ಕಾಮಗಾರಿ

2) ಮಡಿಕಿ ಹೊನ್ನಳ್ಳಿ ಬಾಂದಾರ.

3) ಮಿಶ್ರಿಕೋಟಿ ಬಾಂದಾರ

ಏತ ನೀರಾವರಿ ಯೋಜನೆಗಳು:

1) ಹಿರೇಹೊನ್ನಳ್ಳಿ ಏತ ನೀರಾವರಿ ಪುನರುಜ್ಜೀವನ ಕಾಮಗಾರಿ.

2) ಗಳಗಿನಗಟ್ಟಿ ಏತ ನೀರಾವರಿ ಯೋಜನೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಇಂತಹ ಕಾಲುವೆಯ ಕಾಮಗಾರಿಯ ಯಾವುದೇ ಯೋಜನೆ ಇರುವುದಿಲ್ಲ.

ಉ) ಶಾಲ್ಮಲಾ, ಯೋಜನೆಯ ಸರ್ವೆ ಕಾರ್ಯವು ಪೂರ್ಣಗೊಂಡಿದ್ದು ಯೋಜನಾ ವರದಿಯನ್ನು ತಯಾರಿಸಲಾಗಿದೆ. ವರದಿಯಲ್ಲಿ ಕೆಲವು ವಿನ್ಯಾಸದ ಮಾರ್ಪಾಡು ಆಗುತ್ತಿದ್ದು ಅದು ಪೂರ್ಣಗೊಂಡ ನಂತರ ಪರಿಶೀಲಿಸಲಾಗುವುದಿಲ್ಲ.

ಊ) ಯೋಜನೆಯ ಪ್ರಾಥಮಿಕ ತನಿಖಾ ವರದಿಯಂತೆ ಒಟ್ಟು ಅಂದಾಜು ಮೊತ್ತವು ಸುಮಾರು ರೂ. 76 ಕೋಟಿಗಳಾಗುತ್ತಿದ್ದು ಹುಬ್ಬಳ್ಳಿ ಮತ್ತು ಕಲಘಟಗಿ ತಾಲ್ಲೂಕುಗಳ ಸುಮಾರು 21/0 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಉದ್ದೇಶವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	2001–02		2002–03		2003–04		2004–05	
			ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ
1.	ಕಾಮಧೇನು ಬಾಂಧಾರ ಸುಧಾರಣೆ	7.50	5.35	6.49	0.10	–	–	–	–	–
2.	ಮಡಕಿ ಹೊನ್ನಳ್ಳಿ ಬಾಂಧಾರ	30.00	11.20	35.41	0.11	–	–	–	–	–
3.	ಹಿರೇಹೊನ್ನಳ್ಳಿ ಏತ ನೀರಾವರಿ ಯೋಜನೆ (IIನೇ ಹಣಕಾಸು)	19.38	–	–	–	–	19.38	12.69	–	6.31
4.	ಗಳಗಿನಗಟ್ಟಿ ಏತ ನೀರಾವರಿ ಯೋಜನೆ	121.00	18.87	0.73	1.00	6.77	–	1.22	–	4.32
5.	ಮಿಶ್ರಿಕೋಟಿ ಬಾಂಧಾರ	51.00	9.01	–	0.01	–	–	17.65	9.00	8.03